www.ecourtsindia.com



ದಿನಾಂಕಃ **13.03.2024** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲು ಃ ಪ್ರತಿವಾದಿ ಪರ, ಶ್ರೀ ಬಿಜಿ ವಕೀಲರಿಂದ,**

ವಾದಿ ನನ್ನ ಹೆಂಡತಿ. ಪ್ರಾಸಾ 3 ನನ್ನ ಸಹ ಸಹೋದರ. ಸದರಿಯವರ ಸಂಬಂದದ ಬಗ್ಗೆ ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. 1998 ರಲ್ಲಿ ಪಂಚಾಯಿತಿ ಪಾಲುಪಟ್ಟಿ ಆದ ಸಂದರ್ಭದಲ್ಲಿ ನಾನು ಹಾಜರಿದೆ. ಆದರೆ ಪಾಲುಪಟ್ಟಿಗೆ ಸಹಿ ಮಾಡಿಲ್ಲ. ಈ ರೀತಿ ಪ್ರತಿವಾದಿ ನಿರ್ಲಕ್ಷಿಸಿದ 14 ವರ್ಷಗಳ ನಂತರ ಈ ದಾವೆ ಹೂಡಲಾಗಿದೆ ಎಂದರೆ ಸರಿ. 1998 ರ ವಿಭಾಗದಲ್ಲಿ ನನ್ನ ಹೆಂಡತಿಗೂ ಸಹ ಹಿಸ್ಸೆ ನೀಡಲಾಗಿತ್ತು ಸಾಕ್ಷಿ ಮುಂದುವರೆದು ಕೇವಲ 30 ಗುಂಟೆ ನೀಡಿದ್ದೆವು ಎಂದು ನುಡಿದಿರುತ್ತಾರೆ. ದಾವೆಯಲ್ಲಿ 5 ನೇ ಪ್ರತಿವಾದಿ ಎಂದರೆ ಶಶಿಕಲಾ ಎಂದು ಹೇಳಿರುತ್ತಾರೆ. ಬೇರೆ ಯಾರಿಗೆ ಮಾರಾಟ ಮಾಡಲು ಪ್ರಯುತ್ನಿಸಿದ್ದಾರೆಂದರೆ ಸಾಕ್ಷಿಯು ಮಾರಾಟ ಕರಾರು ಪತ್ರ ಮಾಡಿದ್ದು ಹಾಜರುಪಡಿಸಿದ್ದೇನೆಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಗಂಡ ಸರಕಾರಿ ನೌಕರಿಯಲಿದ್ದರು ಎಂದರೆ ಸರಿ. ಅವರು ಮೃತ ಪಟ್ಟ ನಂತರ ನಿವೃತ್ತ ವೇತನ 1 ನೇ ಪ್ರತಿವಾದಿ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಎಲ್ಲಾ ಮಕ್ಕಳಿಗೂ ಹಂಚಿಕೊಟ್ಟಿದ್ದಾರೆಂದು ನುಡಿದಿರುತ್ತಾರೆ, ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಲೂ ನಿವೃತ್ತಿ ವೇತನ ಬರುತ್ತಿದ್ದೆ ಎಂದರೆ ಸರಿ. ಸದರಿಯವರಿಗೆ ನಿವೃತ್ತಿ ವೇತನ ಬರುತ್ತಿರುವ ಕಾರಣ ಬೇರೆ ಯಾರೂ ಅವರ ಯೋಗಕ್ಷೇಮ ನೋಡಿಕೊಳ್ಳುವ ಅಗತ್ಯ ಇಲ್ಲ ಎಂದರೆ ಸರಿಯಲ್ಲ, ಅದೇರೀತಿ ಪ್ರತಿವಾದಿಯರು ನಿರ್ಲಕ್ಷ್ಯ ಮಾಡಿದ್ದಾರೆಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ಈಗಾಗಲೇ ವಾದಿ ತನ್ನ ಹಿಸ್ಸೆ ಪಡೆದುಕೊಂಡಿದ್ದು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಎಲ್ಲಾ

This is a True Copy of the Court Records Online. Authenticated @ districts.ecourtsindia.com/cnr/KAMD210007602014/truecopy/order-3.pdf

ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**

This is a True Copy of the Court Records Online. Authenticated @ districts.ecourtsindia.com/cnr/KAMD210007602014/truecopy/order-3.pdf